ಲೋಕದೃಷ್ಟಿ ಮತ್ತು ಬದುಕಿನ ಕ್ರಮವನ್ನು ಬದಲಿಸಿದ ಸ್ತ್ರೀವಾದದ ಚಿಂತನೆಗಳಿಗೂ ಶ್ರೀಮತಿ ಅವರು ಬರಹರೂಪ ನೀಡಿದ್ದಾರೆ.

ಒಂದಷ್ಟು ಪ್ರಶ್ನೆಗಳೊಂದಿಗೆ ಅವರನ್ನು ಬೆಂಗಳೂರಿನ ಯಲಹಂಕದಲ್ಲಿರುವ ಅವರ ಮನೆಯಲ್ಲಿ ಮಾತಾಡಿಸಿದೆ. ಸ್ತ್ರೀವಾದದ ಬಗೆಗೆ ಶುರುವಾದ ನಮ್ಮ ಮಾತು ಸಾಗುತ್ತಾ ಸಾಗುತ್ತಾ ನಮ್ಮ ಬಗೆಗಿನ ಮಾತಾಗಿಬಿಟ್ಟಿದ್ದು ಯಾವಾಗ ಎನ್ನುವುದು ತಿಳಿಯಲೇ ಇಲ್ಲ. ರೈಲು ಹಳಿಯನ್ನು ಬದಲಿಸಿದ್ದು ತಿಳಿಯದ ಹಾಗೆ ಅದು ನಮ್ಮದೇ ಬದುಕಿನ ಒಳಗುಗಳಿಗೆ ಕನ್ನಡಿ ಹಿಡಿಯಿತು. ಮಾತಿನ ಕೊನೆಯಲ್ಲಿ ಆವರಿಸಿದ 'ಗಾಢಮೌನ' ಎಂದಿಗೂ ಮರೆಯಲಾಗದ್ದು. ವ್ಯವಸ್ಥೆ ನಮಗೆ ಕಲಿಸಿರುವ ಮೌಲ್ಯಗಳನ್ನು **unlearn** ಮಾಡಿಕೊಳ್ಳುವ ಹಾದಿಯ ಪಯಣದ ಕುರಿತ ಅವರ ಮಾತುಗಳು ಮನೆಗೆ ಹಿಂದಿರುಗಿ ಬರುವ ದಾರಿಯುದ್ದಕ್ಕೂ ಕಾಡಿತ್ತು. ಈ **unlearning** ಪ್ರಕ್ರಿಯೆಯ ಹಾದಿಯ ಪಯಣ ನಮ್ಮಲ್ಲಿ ಮೊದಲಾಗಬೇಕಿದೆ.

ಎಚ್.ಎಸ್. ಶ್ರೀಮತಿ ಬೆಂಗಳೂರಿನ ಹೊಸಕೋಟೆಯವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಬೆಂಗಳೂರಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ವೃತ್ತಿಜೀವನ ಆರಂಭಿಸಿದ ಅವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಅವರು ಸುಮಾರು 30ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಚಹರೆ', 'ಸೇರಿಕೊಂಡ ಎಳೆಗಳು', 'ಉದ್ಗಮ', 'ಹಳಗನ್ನಡ ಸಾಹಿತ್ಯಾಧ್ಯಯನ ಸಮೀಕ್ಷೆ', 'ಗೌರಿದುಃಖ', 'ಮಹಾಶ್ವೇತಾದೇವಿ ಅವರ ಸಾಹಿತ್ಯ ಸಂಪುಟ 1 ಮತ್ತು 2', 'ದ ಸೆಕೆಂಡ್ ಸೆಕ್ಸ್', 'ಎಲ್ಲರಿಗಾಗಿ ಸ್ತ್ರೀವಾದ', 'ಸ್ತ್ರೀವಾದ ಅಂಚಿನಿಂದ ಕೇಂದ್ರದೆಡೆಗೆ', 'ಸ್ತ್ರೀವಾದ ಮತ್ತು ಲೈಂಗಿಕತಾವಾದ', 'ಸ್ತ್ರೀವಾದಿ ಚಿಂತನೆ ಕೆಲವು ಪ್ರಶ್ನೆಗಳು ಸಂದೇಹಗಳು', 'ತ್ರಿವೇಣಿ ಕಾದಂಬರಿಗಳ ಮರು ಓದು', 'ಆಧುನಿಕ ಭಾರತದಲ್ಲಿ ಮಹಿಳೆ', 'ಸ್ತ್ರೀವಾದ ಪಾರಿಭಾಷಿಕ ಕೋಶ' ಅವರ ಕೆಲವು ಪುಸ್ತಕಗಳಾಗಿವೆ. ಕನ್ನಡದಲ್ಲಿ ಹಲವು ದಿಕ್ಕಿನ ಸ್ತ್ರೀವಾದಿ ಚಿಂತನೆಗಳನ್ನು ಪರಿಚಯಿಸಿದ ಮತ್ತು ಬೌದ್ಧಿಕ ವಲಯಕ್ಕೆ ಹಲವು ಮಹತ್ವದ ಕೃತಿಗಳನ್ನು ಕೊಟ್ಟ ಶ್ರೀಮತಿ ಅವರೊಂದಿಗಿನ ಮಾತುಕತೆ ಇಲ್ಲಿದೆ.

◆ ನೀವು ಸಾಹಿತ್ಯದ ಕಡೆಗೆ ಆಕರ್ಷಿತರಾದದ್ದು ಯಾವಾಗ? ಚಿಕ್ಕಂದಿನಲ್ಲಿ ಮನೆಯಲ್ಲಿ ಅದಕ್ಕೆ ಪೂರಕವಾದ ವಾತಾವರಣವಿತ್ತೇ?

ಅಂತಹ ವಾತಾವರಣ ಏನೂ ಇರಲಿಲ್ಲ. ತುಂಬ ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದುಬಂದವಳು. ಏನಾದರೂ ಮಾಡಬಹುದು ಅನ್ನೋ ಯೋಚನೆ ಕೂಡ ಮಾಡಿರಲಿಲ್ಲ. ನಮ್ಮ ಕಾಲಕ್ಕೆ ಹೆಣ್ಣುಮಕ್ಕಳನ್ನು ಸ್ಕೂಲಿಗೆ ಕಳಿಸಲ್ಲ ಅನ್ನೋ ಹಂತದಿಂದ ಒಂದು ಹೆಜ್ಜೆ ಮುಂದೆ ಹೋಗಿದ್ದರು. ಹೆಣ್ಣುಮಕ್ಕಳನ್ನು ಸ್ಕೂಲಿಗೆ ಕಳಿಸ್ತಿದ್ರು ಯಾಕೆ ಅಂದ್ರೆ ಮದುವೆಗೆ ಗಂಡು ಬಂದಾಗ ಮಗಳು ಏನೂ ಓದಿಲ್ಲ ಅಂತ ಹೇಳೋದಕ್ಕಿಂತ ಎಸ್‌ಎಸ್‌ಎಲ್‌ಸಿ ಓದಿದಾಳೆ ಅಂತ ಹೇಳಬಹುದು ಅಂತ್ಹೇಳಿ ಸ್ಕೂಲಿಗೆ ಕಳಿಸ್ತಿದ್ದರು. ಇದರ ಜೊತೆಗೆ ಹಾಡು, ಮನೆಕೆಲಸ ಬಂದರೆ ಸಾಕು ಅನ್ನೋಂತಹ ವಾತಾವರಣದಲ್ಲಿ ಬೆಳೆದದ್ದು.

ನನ್ನಮ್ಮನ ಮನೆ ಕಡೆ ಸ್ವಲ್ಪ ಓದು, ಸಾಹಿತ್ಯ, ಸಂಗೀತದ ಒಲವಿತ್ತು. ನನ್ನ ಚಿಕ್ಕಮ್ಮ, ಸೋದರಮಾವನ ಮಗಳು ಕಾಲೇಜಿಗೆ ಹೋಗಿದ್ದರು.

ನಮ್ಮೂರಲ್ಲಿ ಹೈಸ್ಕೂಲುವರೆಗೆ ಮಾತ್ರ ಇತ್ತು. ಅಲ್ಲೇ ಹೈಸ್ಕೂಲು ಮುಗಿಸಿದೆ. ನನ್ನಕ್ಕಂದಿರಿಗೆ ಅಲ್ಲಿಂದ ಮುಂದಕ್ಕೆ ಓದೋಕೆ ಬಿಡಲಿಲ್ಲ. ಆಕಸ್ಮಿಕವಾಗಿ ಸಿಕ್ಕ ಅವಕಾಶದಿಂದಾಗಿ ನಾನು ಕಾಲೇಜು